ಕಲ್ಪನೆ ಕಾವ್ಯ

# ಹೇಳುವುದಿದೆ...

ನಾನೇನೋ ಹೇಳುವುದಿದೆ, ಬನ್ನಿ ಹೀಗೆ
ನಾನ್ಯಾರು ಎಂದು ಕೇಳದೆ
ತುಸು ಸನಿಹ ಬನ್ನಿ ಹೀಗೆ
ಪಿಸುಗುಟ್ಟಿದರೆ ಕೇಳುವುದೆ ಎನ್ನದಿರಿ
ಕೂಗಲಾರೆನು ಹಾಗೆ – ದಿನತುಂಬದೆ
ಬರಲಾರದು ಬಸಿರು ಹೊರಗೆ.

ಸುತ್ತಿದೆ ಯುಗಗಳ ಬಲೆ
ಪರಪರನೆ ಹರಿಯಲಾಗದು
ಮೆತ್ತಿರುವುದ ತೆಗೆಯುವುದು ಹೇಗೆ?
ಹೇಗಾದರು ಹೇಳಬೇಕಿದೆ ನಿಮಗೆ
ತುಸು ಬನ್ನಿ, ಹತ್ತಿರ ಹೀಗೆ

ನನ್ನೊಳಗು ಹೇಳು ಎಂದಿದೆ, ಹೇಳಲಾಗುತ್ತಿಲ್ಲ...
ಬಿಚ್ಚಿಟ್ಟರೆ ದಿಗಿಲು, ಬದುಕು ಬಟಾಬಯಲು
ಮುಚ್ಚಿಟ್ಟರೆ ಒಳಗೆಲ್ಲೊ ಭುಗಿಲು
ಹಸಿಬಿಸಿ ಉಸಿರುಗಳ ಹೊರಹಾಕಬೇಕಿದೆ...
ಬನ್ನಿ ಹೀಗೆ, ತುಸು ಬನ್ನಿ ಹೀಗೆ.



● **ಕನಕಮಾಲಿನಿ ಎಂ.ಎ.**

# ಪಿಸುಮಾತು

ಯಾವುದೋ ಗುಟ್ಟನು ಹೇಳಲು
ಬಂದಂತಿದೆ ಹುಡುಗಿ ನೀ ಚಂದದಿ
ರೂಪವೂ ಮಬ್ಬಿನಲಿ ಅಡಗಿದೆ
ಇರಬಹುದು ನೀನು ಹೊಳೆವ ಕೌಮುದಿ

ಬೆಳ್ಳಗೆ ಬೆಳಗುವ ದಿರಸಿನಲಿ
ನಸುಗೆಂಪಿನ ಹೂವಿನ ಚಿತ್ತಾರಗಳು
ಪಿಸುಗುಡುವ ಸವಿಯಾದ
ನಿನ್ನ ಮಾತುಗಳು ದೂರ
ಕೇಳಿಸದೆ ಮರುಗಿವೆ ನನ್ನೀ ಕಿವಿಗಳು

ನಿನ್ನ ಗುಟ್ಟಿನಲಿ ಯಾರು ಅಡಗಿರುವರು–
ಅದೇಕೆ ನೀನು ಪಿಸುನುಡಿಗಳು
ಕೇಳಬಾರದೆಂದು ಮೊಗಕೆ
ಕರಗಳನು ಮರೆಯಾಗಿ ಹಿಡಿದಿರುವೆ...

ನಿನ್ನ ಪಿಸುನುಡಿಯಲಿ ಕೇಳಲಾಗದ
ಅದೆಷ್ಟು ಸದ್ದುಗಳಿವೆಯೋ
ನಿನ್ನ ಕಿರುದನಿಯ ಮರ್ಮರದೊಳಗೆ
ಅದಾವ ಸಂಗೀತ ಅಡಗಿದೆಯೋ...

● **ರಂಜಿತಾ ಎಂ.**